


# ಮಜೀದ್ ಮಜಿದಿ

ಟೆಹರಾನ್‌ನ ಮಧ್ಯಮ ವರ್ಗದ ಕಟುಂಬದಲ್ಲಿ ಹುಟ್ಟಿದ 58 ವರ್ಷದ ಮಜೀದ್ ಮಜಿದಿ ಬಾಲ್ಯದಲ್ಲೇ ನಟನೆಯಲ್ಲಿ ಆಸಕ್ತಿ ಬೆಳೆಸಿಕೊಂಡವರು. ತಮ್ಮ 14ನೇ ವಯಸ್ಸಿನಲ್ಲಿ ಟೆಹರಾನ್‌ನ ಹವ್ಯಾಸಿ ನಾಟಕ ತಂಡ ಸೇರಿದ್ದರು. ಮುಂದೆ ಅಲ್ಲಿನ ನಾಟಕ ಶಾಲೆಯಲ್ಲಿ ಅಭಿನಯದಲ್ಲಿ ತರಬೇತಿ ಪಡೆದುಕೊಂಡರು.

1979ರ ಇರಾನ್ ರಾಜಕೀಯ ಕ್ರಾಂತಿಯ ನಂತರ ಅವರು ಸಿನಿಮಾ ಬಗ್ಗೆ ಆಸಕ್ತಿ ಬೆಳೆಸಿಕೊಂಡರು. 'ಚಿಲ್ಡ್ರನ್ಸ್ ಆಫ್ ಹೆವನ್' ಅವರ ನಿರ್ದೇಶನದ ಮೊದಲ ಚಿತ್ರ. ಅದು ಅಕಾಡೆಮಿ ಪ್ರಶಸ್ತಿ ಪಡೆಯಿತು. ಅವರ 'ಸಾಂಗ್ ಆಫ್ ಸ್ಪಾರೋಸ್' ಚಿತ್ರ 2008ರಲ್ಲಿ ವಿಶಾಖಪಟ್ಟಣದಲ್ಲಿ ನಡೆದ ಭಾರತದ ಅಂತರರಾಷ್ಟ್ರೀಯ ಚಿತ್ರೋತ್ಸವದ ಉದ್ಘಾಟನಾ ಚಿತ್ರವಾಗಿ ಪ್ರದರ್ಶನಗೊಂಡಿತ್ತು.

2008ರ ಬೀಜಿಂಗ್ ಒಲಿಂಪಿಕ್ಸ್ ಕ್ರೀಡಾಕೂಟದ ಪೂರ್ವಭಾವಿಯಾಗಿ ಬೀಜಿಂಗ್ ನಗರವನ್ನು ಪರಿಚಯಿಸಲು ಚೀನಾ ಸರ್ಕಾರ ಮಜೀದ್ ಅವರ ನಿರ್ದೇಶನದಲ್ಲಿ 'ದ ವಿಷನ್ ಆಫ್ ಬೀಜಿಂಗ್' ಎಂಬ ಸಾಕ್ಷ್ಯಚಿತ್ರವನ್ನು ತಯಾರಿಸಿತ್ತು.

2015ರಲ್ಲಿ ಮಜಿದಿ ಅವರು ನಿರ್ದೇಶಿಸಿದ ಮಹಮ್ಮದ್ ಪೈಗಂಬರ್ ಅವರ ಬದುಕು ಕುರಿತ 'ಮುಹಮ್ಮದ್ ದ ಮೆಸೆಂಜರ್ ಆಫ್ ಗಾಡ್' ಚಿತ್ರ ದೊಡ್ಡ ಮಟ್ಟದಲ್ಲಿ ಮುಸ್ಲಿಂ ಜಗತ್ತಿನ ಗಮನ ಸೆಳೆಯಿತು. ಹಲವಾರು ಸಿನಿಮಾಗಳು ಮತ್ತು ಸಾಕ್ಷ್ಯಚಿತ್ರಗಳ ಮೂಲಕ ಮಜೀದ್ ಮಜಿದಿ ಇರಾನ್ ಮಾತ್ರವಲ್ಲ ಜಾಗತಿಕ ಸಿನಿಮಾ ರಂಗದಲ್ಲೂ ಪ್ರಸಿದ್ಧರು.

| | | |
|---|---|---|
| ಚಿತ್ರ | : | **ಬಿಯಾಂಡ್ ದ ಕ್ಲೌಡ್ಸ್** |
| ನಿರ್ದೇಶನ | : | **ಮಜೀದ್ ಮಜಿದಿ** |
| ಭಾಷೆ | : | **ಹಿಂದಿ, ತಮಿಳು ಹಾಗೂ ಇಂಗ್ಲಿಷ್** |

ಮನಸ್ಸು ಬದಲಾಯಿಸುತ್ತಾನೆ. ಅಮೀರ್‌ನ ಮಾನವೀಯತೆ ಮತ್ತು ಭಾವೋದ್ವೇಗಗಳ ತಾಕಲಾಟದಲ್ಲಿ ಮಾನವೀಯತೆ ಗೆಲ್ಲುತ್ತದೆ. ಮಜಿದಿ ಪ್ರೇಕ್ಷಕರ ಮನಸ್ಸು ಗೆಲ್ಲುತ್ತಾರೆ.

ಜೈಲಿನಲ್ಲಿ ತಾರಾಳ ಸಹ ಕೈದಿಯೊಬ್ಬಳು ಕಾಯಿಲೆಯಿಂದ ಸಾಯುತ್ತಾಳೆ. ಅವಳ ಸಣ್ಣ ಮಗ ಚೋಟುವನ್ನು ತಾರಾಳೇ ನೋಡಿಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಶಿಕ್ಷೆ ಅನುಭವಿಸುವ ತಾಯಂದಿರ ಜತೆಯಲ್ಲೇ ಅವರ ಮಕ್ಕಳೂ ಇದ್ದಾರೆ. ಅವರಿಗೆ ಜೈಲಿನಲ್ಲಿ ಇಲಿಗಳೇ ಸಂಗಾತಿಗಳು. ಕತ್ತಲ ಕೋಣೆಗಳಲ್ಲೇ ಬಾಲ್ಯ ಕಳೆಯುವ, ಬೆಳದಿಂಗಳನ್ನೂ ಕಾಣದಂತಹ ಪರಿಸ್ಥಿತಿಯ ಮೇಲೂ ಮಜಿದಿ ಅವರ ಗಮನ ಸೆಳೆಯುತ್ತಾರೆ.

ಅಕ್ಷಿ ಕ್ರಮೇಣ ಚೇತರಿಸಿಕೊಳ್ಳುತ್ತಾನೆ. ಆದರೆ ಮಾತನಾಡಲು ಸಾಧ್ಯವಾಗದು. ಹೆಚ್ಚಿನ